KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**
**S.C (SESSION CASES)/2/2021**

Complainant(PROSECUTION):
State by Jayapura Police, Rept. by The Public Prosecutor, Chikkamagaluru.

**VERSUS**

Accused:
Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.
----------------------------------------------------------------------------
State Complainant}: The Public Prosecutor, Chikkamagaluru.,
Sri. I.S. THEJASVI appearing for Sreeraj @ Annaiah
----------------------------------------------------------------------------

**Offence punishable under : SEC.314. of INDIAN PENAL CODE,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**S.C. No:2/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ॥ ಚಿದಾನಂದ.ಪಿ.ಎಸ್ | ಪ್ರಾ.ಸಾ.- 10 |
| ತಂದೆ ಹೆಸರು | : | ಸೀತಾರಾಮರಾವ್ | ಚಾ.ಸಾ.- 19 |
| ವಯಸ್ಸು | : | 45 ವರ್ಷ | |
| ಉದ್ಯೋಗ | : | ಅಸೋಸಿಯೇಟ್ ಪ್ರೊಫೆಸರ್ , ಫೋರೆನ್ಸಿಕ್ ಮೆಡಿಸನ್ , ಮೆಗ್ಗಾನ್ ಆಸ್ಪತ್ರೆ , ಸಿಮ್ಸ್ ಶಿವಮೊಗ್ಗ | |
| ವಾಸ ಸ್ಥಳ | : | ಶಿವಮೊಗ್ಗ | |

**<u>ದಿನಾಂಕಃ 02-09-2025</u>**

**<u>ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಶ್ರೀಮತಿ ವೀಣಾ -ಪಿ.ಪಿ.ಯವರಿಂದಃ</u>**

1. 2008 ನೇ ಇಸ್ವಿಯಿಂದ ನಾನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ -ಸಿಮ್ಸ್ ನಲ್ಲಿ ಅಸೋಸಿಯೇಟ್ ಪ್ರೊಫೆಸರ್- ಫೋರೆನ್ಸಿಕ್ ಮೆಡಿಸನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 19-02-2019 ರಂದು ನಾನು ಜಯಪುರ ಪೊಲೀಸ್ ಠಾಣೆಯಿಂದ ಕೋರಿಕೆ ಪತ್ರವನ್ನು ಸ್ವೀಕರಿಸಿದ್ದು, ನಾಗರತ್ನ ಎನ್ನುವವರ ಶವದ ಶವ ಪರೀಕ್ಷೆಯನ್ನು ಮಾಡಿಕೊಡುವಂತೆ ಕೋರಿದ್ದು, ಅದೇ ದಿನ ಬೆಳಿಗ್ಗೆ 11.00 ಗಂಟೆಯಿಂದ 12.30 ರವರೆಗೆ ಮೆಗ್ಗಾನ್ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆಯನ್ನು ನಡೆಸಿರುತ್ತೇನೆ.

3. ಮೃತ ದೇಹದ ಮೇಲೆ ಒಂದು ನೈಟಿ, ಕತ್ತಿನಲ್ಲಿ ಒಂದು ದಾರ, ಎಡಗಾಲಿನಲ್ಲಿ ಒಂದು ಕಪ್ಪು ದಾರ ಇತ್ತು. ಅವುಗಳನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ, ಸೀಲ್ ಮಾಡಿ , ಮೊಹರಿನೊಂದಿಗೆ ಪೊಲೀಸರಿಗೆ ಕೊಟ್ಟಿರುತ್ತೇನೆ.

4. ಮೃತ ದೇಹದ ಸ್ಥಿತಿಗತಿಗಳನ್ನು ನನ್ನ ವರದಿಯಲ್ಲಿ ವಿವರವಾಗಿ ನಮೂದಿಸಿರುತ್ತೇನೆ.

**- ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾವಿನ ಕಾರಣವನ್ನು ಹೊರತಾಗಿ ಪಿ.ಎಂ.ವರದಿಯಲ್ಲಿ ನಮೂದಿಸಿದ ಯಾವುದೇ ಅಂಶಗಳ ಬಗ್ಗೆ ತನ್ನದು ತಕರಾರು ಇಲ್ಲವೆಂದು ಹೇಳಿದ್ದರಿಂದ ಸಾವಿನ ಕಾರಣದ ಬಗ್ಗೆ ಈ ಸಾಕ್ಷಿಯ ಸಾಕ್ಷ್ಯವನ್ನು ಹೇಳುವಂತೆ ನಿರ್ದೇಶಿಸಲಾಯಿತು.**

5. ಸಾಕ್ಷಿಯು ಮುಂದುವರಿದು ಸಾವಿನ ಕಾರಣವನ್ನು ಕಾಯ್ದಿರಿಸಿ, ಮರಣೋತ್ತರ ಪರೀಕ್ಷಾ ವರದಿಯನ್ನು ನೀಡಿರುತ್ತೇನೆ ಎಂದು ಹೇಳಿರುತ್ತಾರೆ. ಮರಣೋತ್ತರ ಪರೀಕ್ಷಾ ವರದಿಯನ್ನು ನಿ.ಪಿ.24 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 24(ಎ) ಎಂದು ಗುರುತಿಸಲಾಯಿತು.

6. ದಿನಾಂಕಃ 20-03-2020 ರಂದು ಪೊಲೀಸರಿಂದ ಎಫ್ ಎಸ್ ಎಲ್ ವರದಿ, ಎಂ ಎಸ್ ಡಿ ಎಂ ಜನರಲ್ ಆಸ್ಪತ್ರೆ, ಕೊಪ್ಪರವರಿಂದ ಪತ್ರ, ಹಿಸ್ಟೋ ಪೆಥಾಲಜಿ ವರದಿ ಹಾಗೂ ಮೈಕ್ರೋ ಬಯಾಲಜಿ ವರದಿಯನ್ನು ಪಡೆದುಕೊಂಡು, ಅವುಗಳನ್ನು ಪರಿಶೀಲಿಸಿ, ಮೃತೆಯ ಸಾವು septicemia ದಿಂದ ಆಗಿದೆ ಎಂದು ಅಂತಿಮ ಅಭಿಪ್ರಾಯ ವರದಿಯನ್ನು ನೀಡಿರುತ್ತೇನೆ. ಅಂತಿಮ ಅಭಿಪ್ರಾಯ ವರದಿಯನ್ನು ನಿ.ಪಿ. 25 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 25(ಎ) ಎಂದು ಗುರುತಿಸಲಾಯಿತು.

7. ಮೇಲ್ಕಂಡ ಉಲ್ಲೇಖಿತ ವರದಿಗಳಾದ ಎಫ್ ಎಸ್ ಎಲ್ ವರದಿ, ಎಂ ಎಸ್ ಡಿ ಎಂ ಜನರಲ್ ಆಸ್ಪತ್ರೆ, ಕೊಪ್ಪರವರಿಂದ ಪತ್ರ, ಹಿಸ್ಟೋ ಪೆಥಾಲಜಿ ವರದಿ ಹಾಗೂ ಮೈಕ್ರೋ ಬಯಾಲಜಿ ವರದಿಯನ್ನು ಈಗಾಗಲೇ ನಿ.ಪಿ.16 ರಿಂದ 19 ಎಂದು ಗುರುತಿಸಲಾಗಿದೆ.

8. ದಿನಾಂಕಃ 12-08-2020 ರಂದು ತನಿಖಾಧಿಕಾರಿಯು ಗರ್ಭಪಾತದಿಂದಾಗಿ septicemia ಆಗಬಹುದೇ ಎಂದು ಅಭಿಪ್ರಾಯ ವರದಿ ಕೇಳಿದ್ದು, ಈ ಪ್ರಕರಣದಲ್ಲಿ ಇರುವ ದಾಖಲಾತಿಗಳ ಆಧಾರದ ಮೇರೆಗೆ ಗರ್ಭಪಾತದಿಂದ septicemia ಆಯಿತೇ ಅಥವಾ septicemia ದಿಂದ ಗರ್ಭಪಾತ ಆಯಿತೇ ಎಂಬುದರ ಬಗ್ಗೆ ಅಭಿಪ್ರಾಯ ಕೊಡಲು ಸಾಧ್ಯವಿಲ್ಲವೆಂದು ವರದಿ ಕೊಟ್ಟಿರುತ್ತೇನೆ. ಸದರಿ ವರದಿಯನ್ನು ನಿ.ಪಿ. 26 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 26(ಎ) ಎಂದು ಗುರುತಿಸಲಾಯಿತು.

S.C.2/2021, P.W.10

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ.ಎಸ್.ಟಿ. ವಕೀಲರಿಂದಃ</u>**

9. Septicemia ಹಲವಾರು ವೈದ್ಯಕೀಯ ಕಾರಣಗಳಿಂದಾಗಿ ಸಂಭವಿಸಬಹುದು ಎಂದರೆ ಸರಿ. Septicemia ಎಂದರೆ ವಿಪರೀತವಾದ blood infection. ಔಷಧಿಗಳ ವ್ಯತ್ಯಾಸದಿಂದಾಗಿ septicemia ಆಗುವುದಿಲ್ಲ ಎಂದರೆ ಸರಿ. Un hygienic ಗರ್ಭಪಾತವನ್ನು ಮಾಡಿಸಿದಾಗ septicemia ಆಗುವ ಸಾಧ್ಯತೆ ಇದೆ ಎಂದರೆ ಸರಿ.

10. ಗರ್ಭಪಾತದ process ನಲ್ಲಿ ವೈದ್ಯಕೀಯ ನಿರ್ಲಕ್ಷತೆಯಿಂದ (negligence) ಅಂದರೆ sterile ಮಾಡದಿರುವ ಉಪಕರಣಗಳನ್ನು ಉಪಯೋಗಿಸಿದಲ್ಲಿ septicemia ಆಗುವ ಸಾಧ್ಯತೆ ಇದೆ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-02-09-2025

(ರಾಜೇಶ್ವರಿ ಎನ್ ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ಚ

Visit **ecourts.gov.in** for updates or download mobile app “**eCourts Services**” from Android or iOS